ಸಿದ್ಧವಿದೆ. ಆದರೆ, ಆಳುಕಾಳುಗಳಿಗೆ, ಕಾರ್ಮಿಕರಿಗೆ, ಕನಸಿನಲ್ಲೂ ಕೂಡ ಸಮಾನತೆಯ ಹಕ್ಕನ್ನು ನೀಡಲು ಸಿದ್ಧರಿಲ್ಲ ಅವರ್‍ಯಾರು. ಬಡತನದ ಬೇಗೆಯಿಂದ ಅವರನ್ನು ಮುಕ್ತಗೊಳಿಸಲು, ಅವರಿಗೆ ಶಿಕ್ಷಣವನ್ನು ನೀಡಲು ನಾವು ಇಚ್ಛಿಸಿರುವೆವು. ಇಂದು ಜಗತ್ತಿನಾದ್ಯಂತ ಇದರ ಮಂದಮಾರುತ ಬೀಸುತ್ತಿದೆ. ಪ್ರತಿಯೊಬ್ಬರಿಗೂ ಗೊತ್ತು ಇದರ ನೈಜ ಅರ್ಥ. ಆದರೆ, ಯಾರೊಬ್ಬರೂ ತುಟಿ ಎರಡು ಮಾಡುತ್ತಿಲ್ಲ ಸಾರ್ವತ್ರಿಕವಾಗಿ. ನಮ್ಮ ರಾಜಕೀಯ ಮಹತ್ವವನ್ನು (ಹೆಚ್ಚಿಸಿಕೊಳ್ಳಬೇಕೆಂತಲು) ನಮ್ಮ ಅಧಿಕಾರವನ್ನು, ನಮ್ಮ ರಾಷ್ಟ್ರೀಯ ಚಳವಳಿಯನ್ನು ಹಾಗೂ ನಮ್ಮ ದನಿ ಕೇವಲ ಬೆರಳೆಣಿಕೆಯ ಸುಶಿಕ್ಷಿತರ ದನಿಯಾಗಿರದೆ ಇಡೀ ಮನುಕುಲದ ಸಂಘಟಿತ ದನಿಯಾಗಿರಬೇಕೆಂದು ನಾವು ಬಯಸಿರುವುದೇ ಅದರ ವ್ಯಾಖ್ಯಾನ. ಆದರೆ, ವೃಂದಾಳಿಗೆ ಇದೆಲ್ಲವನ್ನು ಯಾರು ವಿವರಿಸಿ ಹೇಳುವವರು?

## ಪತ್ನಿ

ನೆನ್ನೆ, ತಮ್ಮ ನೈಜ ಸ್ವರೂಪವನ್ನು ನನ್ನ ಸ್ವಾಮಿ ಹಾಗೂ ಧಣಿ ರಟ್ಟು ಮಾಡಿದರು. ಆ ಕಾರಣದಿಂದ ನಾನು ಖಿನ್ನಳಾಗಿರುವೆ ಇಂದು. ಓ ದೇವರೆ! ಅದೆಂಥ ಢೋಂಗಿ, ಅದೆಂತ ಕುರುಡು ಸ್ವಾರ್ಥ ಇದೆ ಈ ಜಗತ್ತಿನಲ್ಲಿ. ಬಡವರನ್ನು ಹತ್ತಿಕ್ಕಲು ನಾವು ಅದೆಷ್ಟು ಜಾಗೃತರಾಗಿದ್ದೀವಿ. ಅವರ ಬೋಧನೆಗಳನ್ನು ಕೇಳಿದ ಮೇಲೆ ನಾನವರನ್ನ ದೇವರ ಸಮಾನವೆಂದು ಭಾವಿಸಿಕೊಂಡಿದ್ದೆ. ಆದರೆ, ಎರಡು ದೋಣಿಯಲ್ಲಿ ಕಾಲಿಟ್ಟು ಯಾನಿಸುವ ಕಲೆಗಾರಿಕೆ ತಿಳಿದವರನ್ನು ಸಮುದಾಯದ ದಾನಿ ಎಂದೆಲ್ಲ ಕರೆಯುತ್ತಾರೆಂದು ನಾನಿಂದು ಮನಗಂಡೆ.

ನೆನ್ನೆ, ನನ್ನ ನಾದಿನಿಯ ಪ್ರಸ್ತ ಮಾಡಿ ಅವಳ ಗಂಡನ ಮನೆಗೆ ಕಳುಹಿಸಿದರು. ನಮ್ಮ ಸಮುದಾಯದ ಹಲವು ಸ್ತ್ರೀಯರನ್ನು ಆಹ್ವಾನಿಸಲಾಗಿತ್ತು. ಅವರೆಲ್ಲ ಭರ್ಜರಿ ವೇಷಭೂಷಿತರಾಗಿ, ಒಡವೆಗಳನ್ನು ಧರಿಸಿ ಬಂದಿದ್ದರು, ನೆಲದ ಹಾಸಿನ ಮೇಲೆ ಕುಳಿತಿದ್ದರು. ನಾನು ಅವರನ್ನೆಲ್ಲ ಸ್ವಾಗತಿಸಿದೆ, ಬಳಿಕ ನನ್ನ ಕಣ್ಣು ಬಾಗಿಲ ಕಡೆ ಹೋಯಿತು. ಅಲ್ಲಲ್ಲ ಚಪ್ಪಲಿಗಳು, ಶೂಗಳು ಹರಡಿದ್ದವು. ಅಲ್ಲಿ ನೆಲದ ಮೇಲೆ ಹಲವು ಸ್ತ್ರೀಯರು ಕುಳಿತಿದ್ದರು. ಪ್ರಸ್ತ ಸಮಾರಂಭಕ್ಕೆ ಆಗಮಿಸಿದ್ದ ಆ ಬಡ ಸ್ತ್ರೀಯರು ಅಲ್ಲಿ ಕುಳಿತಿರುವುದು ನನ್ನೊಳಗೆ ಖೇದ ಹುಟ್ಟು ಹಾಕಿತು. ನಾನವರನ್ನು ಒಳಗೆ ಕರೆದು ನೆಲಹಾಸಿನ ಮೇಲೆ ಕೂರಿಸಿದೆ. ಈ ಸಂದರ್ಭದಲ್ಲಿ, ನೆರೆದ ಕುಲೀನ ಸ್ತ್ರೀ ಬಳಗ ಒಬ್ಬರ ಮುಖ ಒಬ್ಬರು ನೋಡಲು ಶುರು ಮಾಡಿದರು. ತುಸು ಸಮಯದ ಬಳಿಕ, ಅವರೆಲ್ಲ ಏನೇನೋ ನೆಪ ಹೇಳುತ್ತ ಜಾಗ ಖಾಲಿ ಮಾಡಿದರು. ಯಾರೋ ನನ್ನ ಪತಿಗೂ ಇದನ್ನು ಹೇಳಿದರು. ರೋಷಗೊಂಡ ಅವರು, ಒಳ ಬಂದವರೆ, ಬುಸುಗುಡುತ್ತ, 'ಏನಾಗಿದೆ ನಿನಗೆ? ನಮ್ಮ ಮುಖಕ್ಕೆ ಮಸಿ ಬಳಿಯುವ ಇಚ್ಛೆನಾ ನಿಂದು? ಯಾರು ಯಾರ ಜತೆ ಕುಳಿತಿರಬೇಕು ಅನ್ನೋ ಪರಿಜ್ಞಾನನಾ ಕೊಟ್ಟಿಲ್ವ ದೇವರು ನಿನ್ಗೆ? ಕುಲೀನ ಸ್ತ್ರೀಯರ ಜೊತೆಗಾ ಕೆಳಸ್ತರದ ಸ್ತ್ರೀಯರನ್ನು ಕೂರಿಸುವುದು? ಅವರಾದರೂ ಏನಂದುಕೊಂಡಾರು? ನಾನು ಮುಖ ಎತ್ತಿ ತೋರಿಸಲು ಆಗದಂತೆ ಮಾಡಿರುವಿ ಎಲ್ಲೂ. ಇದು ನಿಜಕ್ಕೂ ಭಯಾನಕ.' ಎಂದರು.

ನಾನಾಗ ಸರಳವಾಗಿಯೇ `ಅಪಮಾನಕ್ಕೆ ಆ ಹೆಂಗ್ಸರಾದರೂ ಏಕೆ ತುತ್ತಾಗಬೇಕು? ಎಲ್ಲರಲ್ಲಿರುವ ಆತ್ಮ ಒಂದೇ ಅಲ್ಲವೆ? ಆಭರಣ ಧರಿಸಿದಾಕೆಯ ಆತ್ಮ ಅದಕ್ಕಾಗಿಯೇ ಉನ್ನತವಾಗಲಿದೆಯಾ?' ಎಂದೆ.

ನನ್ನ ಗಂಡ ತುಟಿ ಕಚ್ಚುತ್ತ `ಹೇ! ಬಾಯ್‌ಮುಚ್ಚು, ಶೃತಿ ಮೀರಿದ ನಿನ್ನ ಹಳೆ ರಾಗ ನಿಲ್ಲಿಸು. ಆತ್ಮ ಒಂದೇ, ಓರ್ವನೇ ದೇವರು ಅಂತ ಹಾಡಿದ್ದೇ ಹಾಡೋ ಕಿಸಬಾಯಿ ದಾಸನ ತರ ಸದಾ ಆಡಬೇಡ. ನಿನಗೇನೂ ಗೊತ್ತಿಲ್ಲ, ಅರ್ಥನೂ ಆಗಲ್ಲ ಅದು ನಿನಗೆ. ಊರಲ್ಲಿ ನಾನು ಜನರೆದುರು ಮುಖ ಎತ್ತಿ ತಿರುಗಾಡದ ಹಾಗೆ ಮಾಡುರುವಿ, ಸಾಲದೂ ಅಂತ ತೀರಾ ಹುಚ್ಚು ಹುಚ್ಚಾಗಿ ಆಡುತ್ತಿರುವಿ, ಆ ಕುಲೀನ ಸ್ತ್ರೀಯರ ಆತ್ಮ ಅದೆಂಥ ಸಂಕಟಕ್ಕೀಡಾಗಿದೆ ಅನ್ನೋದು ಗೊತ್ತ ನಿನಗೆ, ಆ ಬಗ್ಗೆ ನೀನು ಯೋಚಿಸಿದ್ದೀಯಾ?' ಎಂದು ದಬಾಯಿಸಿದರು. ಅಚ್ಚರಿಯಿಂದ ಅವರನ್ನು ದಿಟ್ಟಿಸುವುದನ್ನು ಬಿಟ್ಟು ಬೇರೇನೂ ಮಾಡಲಾಗಲಿಲ್ಲ ನನಗೆ.

* * *

ಇಂದು ಮುಂಜಾನೆ, ನಾನು ನಿದ್ದೆಯಿಂದ ಎದ್ದಾಗ ನನಗೊಂದು ವಿಚಿತ್ರ ದೃಶ್ಯ ಕಣ್ಣಿಗೆ ರಾಚಿತು. ಕಳೆದ ರಾತ್ರಿ ನಮ್ಮ ಮನೆಗೆ ಬಂದಿದ್ದ ನೆಂಟರಿಷ್ಟರು ತಿಂದುಂಡ